# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 119/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : ಶ್ರೀ ಜೈಶಂಕರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | : ಶ್ರೀ ಯಕ್ಷದಾರ.ಕೆ.ವಿ | | 11.09.2023 |
| ವಯಸ್ಸು | : 31 ವರ್ಷ | | |
| ವೃತ್ತಿ | : ಚಾಲಕ | ಪ್ರಾ.ಸಾ. | : 01 |
| ವಾಸಸ್ಥಳ | : ಮೈಸೂರು | ಚಾ.ಸಾ. | : 01 |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

. ಮೃತ ಲತಾ ಇವರು ನನಗೆ ಅತ್ತೆಯಾಗಬೇಕು. ಮೃತ ಲತಾ ಇವರ ಗಂಡನ ಹೆಸರು ಲೇ.ನಾಗರಾಜು. ಮೃತ ಲತಾ ಮತ್ತು ನಾಗರಾಜು ಇವರ ಮೊದಲ ಮಗಳು ರಶ್ಮಿ.ಎನ್ ಇವರನ್ನು ನಾನು ಮದುವೆಯಾಗಿದ್ದೇನೆ. ಮೃತ ಲತಾ ಇವರ ಎರಡನೇ ಮಗಳು ನಿಮಿಷಾಂಭ ಇವರನ್ನು ಸಂತೋಷ್ ಕುಮಾರ್.ಎಸ್.ವಿ ಎನ್ನುವವರು ಮದುವೆಯಾಗಿದ್ದಾರೆ. ಮೃತ ಲತಾ ಇವರ ಮೂರನೇ ಮಗ ನಾಗಾರ್ಜುನ್.ಎನ್ ಎಂಬುದಾಗಿದ್ದು ಈಗಲೂ ಅವರು ಮದುವೆಯಾಗಿರುವುದಿಲ್ಲ. ನನ್ನ ಮದುವೆಗಿಂತ ಮೊದಲೇ ನನ್ನ ಹೆಂಡತಿ ತಂದೆ ನಾಗರಾಜು ಮರಣಹೊಂದಿದ್ದರು. ನನ್ನ ಹೆಂಡತಿಯ ತಂದೆ ನಾಗರಾಜು ಮತ್ತು ಶಿವಪ್ರಕಾಶ್ ಎನ್ನುವವರು ಬಿಸಿನೆಸ್ ಪಾರ್ಟ್ನರ್ ಗಳಾಗಿದ್ದು. ನನ್ನ ಹೆಂಡತಿಯ ತಂದೆ ಮರಣಹೊಂದುವ ಮೊದಲು ತನ್ನ ಪಾಲುದಾರನಾದ ಶಿವಪ್ರಕಾಶ್ ಇವರಿಗೆ ತನ್ನ ಮರಣದ ಬಳಿಕ ತನ್ನ ಕುಟುಂಬ ಜವಬ್ದಾರಿಯನ್ನು ನೋಡಿಕೊಳ್ಳುವಂತೆ ವಿನಂತಿ ಮಾಡಿಕೊಂಡಿದ್ದರಿಂದ ಅವರ ಮರಣದ ಬಳಿಕ

ನನ್ನ ಹೆಂಡತಿಯ ತಾಯಿ ಮನೆಯವರ ಕುಟುಂಬದ ಆಗುಹೋಗುಗಳನ್ನು ಶಿವಪ್ರಕಾಶ್ ಇವರೇ ನೋಡಿಕೊಳ್ಳುತ್ತಿದ್ದರು.

*2.* ಮೊದಲಿಗೆ ನನ್ನ ಅತ್ತೆ ಮತ್ತು ಕುಟುಂಬದವರು ಮೈಸೂರಿನ ಅಗ್ರಹಾರದಲ್ಲಿ ವಾಸವಿದ್ದರು ನಂತರ ಶ್ರೀನಗರದಲ್ಲಿ ಸ್ವಂತ ಮನೆ ಕಟ್ಟಿಸಿಕೊಂಡು ಅವರ ಕೊಲೆ ಆಗುವ *3* ತಿಂಗಳ ಹಿಂದಿನಿಂದ ಶ್ರೀನಗರದ ಮನೆಯಲ್ಲಿ ವಾಸವಿದ್ದರು. ನನ್ನ ಹೆಂಡತಿಯ ತಂದೆ ಶಿವಪ್ರಕಾಶ್ ಇವರಿಗೆ *4* ಲಕ್ಷ ರೂಪಾಯಿಗಳನ್ನು ಹಣ ಕೊಟ್ಟು ತನ್ನ ಮಕ್ಕಳಿಗೆ ಏನಾದರೂ ನೆಲೆ ಮಾಡುವಂತೆ ಕೇಳಿಕೊಂಡಿದ್ದರು ಆ ಕಾರಣದಿಂದ ಆ ಹಣ ಮತ್ತು ನನ್ನ ಅತ್ತೆ ಕೊಟ್ಟಿದ್ದ ಸ್ವಲ್ಪ ಹಣವನ್ನು ಪಡೆದುಕೊಂಡು ಶಿವಪ್ರಕಾಶ್ ಇವರು ತಮ್ಮ ಹೆಸರಿನಲ್ಲಿದ್ದ ಶ್ರೀನಗರದ *30–40* ಅಡಿಯ ಜಾಗವನ್ನು ನನ್ನ ಅತ್ತೆ ಲತಾ ಇವರ ಹೆಸರಿಗೆ ಮಾಡಿಸಿಕೊಟ್ಟಿದ್ದರು. ಶಿವಪ್ರಕಾಶ್ ಇವರು ನನ್ನ ಅತ್ತೆಯ ಕುಟಂಬದ ಗೆಳೆಯನಾಗಿದ್ದರಿಂದ ***(family friend)*** ಅವರು ನನ್ನ ಅತ್ತೆಯ ಮನೆಗೆ ಬಂದು ಹೋಗಿ ಮಾಡುತ್ತಿದ್ದರು. ಆವರು ಆ ರೀತಿ ಬಂದುಹೊಗುವುದು ಶಿವಪ್ರಕಾಶ್ ಇವರ ಹೆಂಡತಿ ಮಕ್ಕಳಿಗೆ ಗೊತ್ತಿತ್ತು. ಶಿವಪ್ರಕಾಶ್ ಇವರ ಮಗ ಸಾಗರ್ ಬಹಳಷ್ಟು ಸಾಲ ಮಾಡಿಕೊಂಡಿದ್ದು ಆ ಕುರಿತಾಗಿ ಸಾಗರ್ ನು ಶಿವಪ್ರಕಾಶ್ ಇವರೊಂದಿಗೆ ಜಗಳ ಮಾಡುತ್ತಿದ್ದ ಬಗ್ಗೆ ಶಿವಪ್ರಕಾಶ್ ಇವರು ನಮ್ಮೊಂದಿಗೆ ಹೇಳಿಕೊಂಡಿದ್ದರು.

*3.* ದಿಃ*21.10.2021* ರಂದು ರಾತ್ರಿ *10* ಗಂಟೆಗೆ ನಾನು ನನ್ನ ಮನೆಯಲ್ಲಿದ್ದಾಗ ಶಾರದಾ ಎನ್ನುವವರು ಮೊಬೈಲ್ ನಿಂದ ನನ್ನ ಹೆಂಡತಿ ಮೊಬೈಲ್ ಗೆ ಕರೆ ಬಂದಿತ್ತು. ಆ ಕಾಲಕ್ಕೆ ಶಾರದಮ್ಮ ಇವರು ನನ್ನ ಹೆಂಡತಿಗೆ ನಿಮ್ಮ ಅಂಕಲ್ ಶಿವಪ್ರಕಾಶ್ ಅವರ ಮಗ ನಿಮ್ಮ ತಾಯಿಯ

ಮನೆ ಬಳಿ ತುಂಬಾ ಗಲಾಟೆ ಮಾಡುತ್ತಿದ್ದಾನೆ ಬನ್ನಿ ಎಂದು ಹೇಳಿದ್ದರು. ಆಗ ನಾನು, ನನ್ನ ಹೆಂಡತಿ ಮತ್ತು ಮಗಳು *5* ರಿಂದ *10* ನಿಮಿಷದಲ್ಲಿ ನನ್ನ ಅತ್ತೆ ಮನೆ ಬಳಿ ಹೋಗಿ ನೋಡಿದ್ದೇವು. ಆ ಕಾಲಕ್ಕೆ ಮನೆಯ ಮುಂದಗಡೆ ಬಲ ಭಾಗದಲ್ಲಿ ಶಿವಪ್ರಕಾಶ್ ಇವರು ಮತ್ತು ಎಡಭಾಗದಲ್ಲಿ ನನ್ನ ಅತ್ತೆಯವರು ರಕ್ತ ಸ್ರಾವದಿಂದ ಮರಣಹೊಂದಿ ಬಿದಿದ್ದರು. ಆ ಕಾಲಕ್ಕೆ ನನ್ನ ಭಾವ ಮೈದ ನಾಗಾರ್ಜುನನಿಗೆ ಕೈ, ತಲೆ ಮತ್ತು ಕಿವಿಗಳ ಬಳಿ ಗಾಯಗಳಾಗಿ ರಕ್ತ ಬರುತ್ತಿತ್ತು ಅಲ್ಲೇ ಇದ್ದ. ಆ ಕಾಲಕ್ಕೆ ನಾನು ನಾಗಾರ್ಜುನನನ್ನು ನನ್ನ ಕಾರಿನಲ್ಲಿ ಮೈಸೂರಿನ ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಆ ರೀತಿ ಹೋಗುವ ಕಾಲಕ್ಕೆ ಆ ದಿನ ರಾತ್ರಿ *9.30* ರಿಂದ *9.45* ರ ಒಳಗಡೆ ಸಾಗರ್ ಅವರ ಮನೆ ಬಳಿ ಬಂದು ನನ್ನ ಅತ್ತೆಯ ಮನೆಯಲ್ಲಿದ್ದ ಶಿವಪ್ರಕಾಶ್ ಇವರನ್ನು ನಿನ್ನೊಂದಿಗೆ ಮಾತನಾಡಬೇಕು ಎಂದು ಹೊರಗಡೆ ಕರೆದು ಮಾತನಾಡುತ್ತಿರುವಾಗ ಸಾಗರ್ ನು ಶಿವಪ್ರಕಾಶ್ ಇವರಿಗೆ ನೀನು ಈ ಮನೆಗೆ ಬರುವುದು ನಮಗೆ ಇಷ್ಟವಿಲ್ಲ ಇನ್ನು ಮುಂದೆ ಬರಬೇಡ ನಮ್ಮ ಜೊತೆ ಇದ್ದುಬಿಡು ಎಂದು ಹೇಳಿದಾಗ ಶಿವಪ್ರಕಾಶ್ ಇವರು ನಾನು ಇಲ್ಲಿಗೆ ಬರುವುದನ್ನು ಬಿಡುವುದಿಲ್ಲ ಎಂದು ಹೇಳಿದಾಗ ಕೋಪಗೊಂಡ ಸಾಗರ್ ನು ತನ್ನೊಂದಿಗೆ ತಂದಿದ್ದ ಮಚ್ಚಿನಿಂದ ಶಿವಪ್ರಕಾಶನಿಗೆ ಹೊಡೆದಿದ್ದಾಗಿ ಹೇಳಿದ್ದ. ಆ ಕಾಲಕ್ಕೆ ಶಿವಪ್ರಕಾಶ್ ಇವರು ಕಿರುಚಿಕೊಂಡಾಗ ತಡೆಯಲು ಹೋಗಿದ್ದ ನನ್ನ ಅತ್ತೆ ಲತಾ ಮೇಲೂ ಸಹ ಸಾಗರ್ ನು ನೀನು ಬದುಕಿದ್ದರೇ ತಾನೇ ನನ್ನ ತಂದೆ ಇಲ್ಲಿಗೆ ಬರುವುದು ಎಂದು ಹೇಳುತ್ತಾ ಅವರಿಗೂ ಸಹ ಮಚ್ಚಿನಿಂದ ಹಲ್ಲೆ ಮಾಡಿದ್ದಾಗಿ ತಡೆಯಲು ಹೋಗಿದ್ದ ನಾಗಾರ್ಜುನನಿಗೂ ಸಹ ಮಚ್ಚಿನಿಂದ ಹೊಡೆದಿದ್ದಾಗಿ ಹೇಳಿದ್ದರು.

*4.* ಶಿವಪ್ರಕಾಶ್ ಇವರು ದುಡಿದ ಹಣವನ್ನು ನನ್ನ ಅತ್ತೆ ಮತ್ತು ಅವರ ಕುಟುಂಬದವರಿಗೆ ಖರ್ಚು ಮಾಡುತ್ತಾರೆ ಎಂದು ಅಭಿಪ್ರಾಯದ ಕಾರಣದಿಂದ ಶಿವಪ್ರಕಾಶ್, ನನ್ನ

ಅತ್ತೆ ಮತ್ತು ನಾಗಾರ್ಜುನನಿಗೆ ಹಲ್ಲೆ ಮಾಡಿದ್ದಾಗಿ ನಾಗಾರ್ಜುನ ಆ ಕಾಲಕ್ಕೆ ಹೇಳಿದ್ದ. ಆ ಕಾಲಕ್ಕೆ ನಾನು ನಾಗಾರ್ಜುನನನ್ನು ಕಾಮಾಕ್ಷಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಅಲ್ಲಿಂದ ಜೆ.ಎಸ್.ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಆ ಕಾಲಕ್ಕೆ ನಾನು ನನ್ನ ಚಿಕ್ಕಮ್ಮನ ಮಗ ಅರುಣ್ ಗೆ ಕರೆ ಮಾಡಿ ಜೆ.ಎಸ್.ಎಸ್ ಆಸ್ಪತ್ರೆ ಬಳಿ ಕರೆಸಿ ಆತನನ್ನು ಅಲ್ಲಿ ಬಿಟ್ಟು ನಾನು ಪುನಃ ನನ್ನ ಅತ್ತೆಯ ಮನೆ ಬಳಿ ಬಂದಿದ್ದೆ. ಆ ಕಾಲಕ್ಕೆ ಪೋ.ಇನ್ಸ್ ಪೆಕ್ಟರ್ ಅಲ್ಲಿಗೆ ಬಂದಿದ್ದರು ಮತ್ತು ಮಹಜರ್ ಮಾಡುತ್ತಿದ್ದರು. ಅದೇ ಸ್ಥಳದಲ್ಲಿ ರಾತ್ರಿ *11.30* ರ ವೇಳೆಯಲ್ಲಿ ನಾನು ದೂರನ್ನು ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ದೂರು ಅದೇ ಇದ್ದು ಅದರಲ್ಲಿರುವ ಸಹಿ ನನ್ನದೆ ಇದೆ. ಸದರಿ ದೂರನ್ನು ನಿ.ಪಿ-*1* ಮತ್ತು ಸಹಿಯನ್ನು ನಿ.ಪಿ-*1*(ಎ) ಎಂದು ಗುರುತಿಸಿದೆ. ಶಿವಪ್ರಕಾಶ್ ಇವರು ಸಂಪಾದಿಸಿದ ಎಲ್ಲಾ ಹಣವನ್ನು ನನ್ನ ಅತ್ತೆ ಮತ್ತು ಅವರ ಕುಟುಂಬದವರಿಗೆ ಖರ್ಚು ಮಾಡುತ್ತಾರೆ ಎಂದು ಅಭಿಪ್ರಾಯದಿಂದ ಸಾಗರ್ ನು ಆ ದಿನ ಶಿವಪ್ರಕಾಶ್ ಮತ್ತು ನನ್ನ ಅತ್ತೆ ಯನ್ನು ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿದ್ದಾಗಿ ನಾನು ದೂರನ್ನು ಕೊಟ್ಟಿದ್ದೇನೆ.

*5.* ದೂರು ಕೊಟ್ಟ ಬಳಿಕ ಆ ಸ್ಥಳದಲ್ಲಿ ಮಹಜರ್ ಮಾಡಿದ್ದರು. ಆ ಸ್ಥಳದಲ್ಲಿ ಮನೆಯ ಬಲ ಭಾಗದಲ್ಲಿ ಶಿವಪ್ರಕಾಶ್ ಇವರ ಶವ ಅಂಗಾತ ಬಿದ್ದಿತ್ತು. ಮನೆಯ ಎಡಭಾಗದಲ್ಲಿರುವ ಖಾಲಿ ಜಾಗದಲ್ಲಿ ನನ್ನ ಅತ್ತೆಯ ಶವ ಮುಖ ಕೆಳಗಡೆ ಮಾಡಿ ಬಿದ್ದಿತ್ತು. ಎರಡು ದೇಹಗಳ ಮೇಲೆ ಬಹಳಷ್ಟು ರಕ್ತ ಬಿದ್ದಿತ್ತು. ದಿಃ*22.10.2021* ರಂದು ಬೆಳಗಿನ ಜಾವ *1.15* ರಿಂದ *3.15* ರವರೆಗೆ ಆ ಮಹಜರ್ ಮಾಡಿದ್ದರು. ಆ ಮಹಜರ್ ಕಾಲಕ್ಕೆ ಅಲ್ಲಿ ಬೀದಿ ದೀಪದ ಬೆಳಕು ಮತ್ತು ಪೋ.ವಾಹನದ ಲೈಟು ಬೆಳಕು ಇತ್ತು. ಆ ಮಹಜರ್ ಕಾಲಕ್ಕೆ ಆ ಎರಡು ಶವಗಳ ಬಳಿ ಬಿದಿದ್ದ ರಕ್ತ

ಹತ್ತಿದ ಮಣ್ಣನ್ನು, ಅಲ್ಲಿಯೇ ರಕ್ತ ಹತ್ತದ ಮಣ್ಣು ಮತ್ತು ಶಿವಪ್ರಕಾಶ್ ಇವರ ಶೂ ಗಳನ್ನು ಮತ್ತು ಆ ಸ್ಥಳದಲ್ಲಿ ಬಿದಿದ್ದ ಕೂದಲಗಳನ್ನು ಸಂಗ್ರಹಿಸಿದ್ದರು. ಸ್ಥಳ ಮಹಜರ್ ಬಳಿಕ ಎರಡು ಶವಗಳನ್ನು ಶವ ಪರೀಕ್ಷೆಗೊಸ್ಕರ ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಮಹಜರ್ ಕಾಲಕ್ಕೆ ನಾನು, ನಾಗಾರ್ಜುನನ ಸ್ನೇಹಿತ ಶ್ರೀಕಾಂತ್, ಬೈರಪ್ಪ ಹಾಜರಿದ್ದೇವು. ಶಿವಪ್ರಕಾಶ್ ಇವರಿಗೆ ಎಡ ಕುತ್ತಿಗೆ, ತಲೆ ಭಾಗಕ್ಕೆ ಏಟಾಗಿತ್ತು. ನನ್ನ ಅತ್ತೆಗೆ ಎಡ ಕೆನ್ನೆಯ ಭಾಗ, ತಲೆ, ಭುಜ ಮತ್ತು ಎಡ ಕೈ ಬೆರಳುಗಳಿಗೆ ಗಾಯಗಳಾಗಿತ್ತು. ಮಹಜರ್ ಗೆ ನಾನು ಸಹಿ ಹಾಕಿದ್ದೆ. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ಮಹಜರ್ ಅನ್ನು ನಿ.ಪಿ-2 ಮತ್ತು ಸಹಿಯನ್ನು ನಿ.ಪಿ-2(ಎ) ಎಂದು ಗುರುತಿಸಿದೆ.

6. ಮಹಜರ್ ಕಾಲಕ್ಕೆ ಕತ್ತಲೆಯಾಗಿದ್ದರಿಂದ ಮಹಜರ್ ಮಾಡಲು ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕೆ ಆ ಎರಡು ಶವಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿದ್ದರು. ಈಗ ನಾನು ನೋಡುತ್ತಿರುವ 3 ಪೊಟೋಗಳು ಸ್ಥಳ ಮಹಜರ್ ಕಾಲಕ್ಕೆ ತೆಗೆದ ಪೊಟೋಗಳು ಇವೆ. ಸದರಿ ಪೊಟೋಗಳನ್ನು ನಿ.ಪಿ-3 ರಿಂದ 5 ಎಂದು ಗುರುತಿಸಿದೆ. ಸದರಿ ಪೊಟೋಗಳ ಸಿ.ಡಿಯನ್ನು ನಿ.ಪಿ-6 ಎಂದು ಗುರುತಿಸಿದೆ. ಸ್ಥಳ ಮಹಜರ್ ಕಾಲಕ್ಕೆ ಜಪ್ತಿ ಮಾಡಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಕೂದಲು, 2 ರಕ್ತ ರಹಿತ ಮಣ್ಣು, 2 ರಕ್ತ ಸಹಿತ ಮಣ್ಣು, ಒಂದು ಜೊತೆ ಸಿಮೆಂಟ್ ಬಣ್ಣದ ಶೂಗಳು ಆ ಮಹಜರ್ ಕಾಲಕ್ಕೆ ಜಪ್ತಿ ಮಾಡಿದ್ದ ವಸ್ತುಗಳು ಇವೆ. ಸದರಿ ವಸ್ತುಗಳನ್ನು ಎಂ.ಒ 1 ರಿಂದ 6 ಎಂದು ಗುರುತಿಸಿದೆ. ಆ ಎಲ್ಲಾ ವಸ್ತುಗಳನ್ನು ಎಂ ಅಕ್ಷರದ ಸೀಲ್ ಹಾಕಿ ಜಪ್ತಿ ಮಾಡಿದ್ದರು. ಆ ದಿನ ಶಿವಪ್ರಕಾಶ್ ಮತ್ತು ನನ್ನ ಅತ್ತೆ ಲತಾ ಅವರ ಮೈ ಮೇಲೆ ಇದ್ದ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಶಿವಪ್ರಕಾಶ್ ಇವರ

ದೇಹದ ಮೇಲೆ ನೀಲಿ ಬಣ್ಣದ ಜೀನ್ಸ್ ಪ್ಯಾಂಟ್, ಬಿಳಿ ಬಣ್ಣದ ನೀಲಿ ಗೆರೆಯ ಶರ್ಟ್, ಕಾಲಿನಲ್ಲಿ ಶೂ ಇದ್ದವು. ನನ್ನ ಅತ್ತೆ ಲತಾ ಅವರ ದೇಹದ ಮೇಲೆ ಅಡಿಕೆ ಬಣ್ಣದ ನೀಲಿ ಬಿಳಿ ಬಣ್ಣದ ಹೂಗಳ ಡಿಸೈನ್ ಇರುವ ನೈಟಿ ಮತ್ತು ಕಪ್ಪು ಬಣ್ಣದ ಪೆಟಿಕೋಟ್ ಇತ್ತು ಸಾಕ್ಷಿ ಪುನಃ ಹೇಳುತ್ತಾರೆ ಕತ್ತಲಾಗಿದ್ದರಿಂದ ಬಣ್ಣ ಸರಿಯಾಗಿ ಗೊತ್ತಾಗಿರಲಿಲ್ಲ. ಈಗ ನಾನು ನೋಡುತ್ತಿರುವ ಜೀನ್ಸ್ ಪ್ಯಾಂಟ್ ಮತ್ತು ಶರ್ಟ್ ಶಿವಪ್ರಕಾಶ್ ಇವರ ದೇಹದ ಮೇಲೆ ಇದ್ದ ಬಟ್ಟೆಗಳು ಇವೆ. ಸದರಿ ಬಟ್ಟೆಗಳನ್ನು ಎಂ.ಒ *7* ಮತ್ತು *8* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನೈಟಿ ಮತ್ತು ಪೆಟಿಕೋಟ್ ನನ್ನ ಅತ್ತೆ ಲತಾ ಇವರ ದೇಹದ ಮೇಲೆ ಇದ್ದ ಬಟ್ಟೆಗಳು ಇವೆ. ಸದರಿ ನೈಟಿ ಮತ್ತು ಪೆಟಿಕೋಟ್ ಗಳನ್ನು ಎಂ.ಒ *9* ಮತ್ತು *10* ಎಂದು ಗುರುತಿಸಿದೆ.

**ಈ ವೇಳೆಗೆ ಆರೋಪಿತನ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು